KAHS510000672023

Presented on : 11-01-2023
Registered on : 11-01-2023
Decided on : 18-07-2023
Duration : 6 months, 7 days

# O.S./29/2023

ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೇಲೂರು.

ದಿನಾಂಕಃ 18 ನೇ ಜುಲೈ ಮಾಹೆ, 2023 ನೇ ಇಸವಿ

: ಉಪಸ್ಥಿತರು :

ಶ್ರೀ ಪ್ರಸನ್ನ ಕುಮಾರ್ ಸಿ., ಬಿ.ಎ.ಎಲ್. ಎಲ್ಎಲ್.ಬಿ.
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಬೇಲೂರು.

ಅಸಲು ದಾವಾ ಸಂಖ್ಯೆಃ 29/2023

ಶ್ರೀ ಪಿ.ಎಂ.ಕೆಂಪೇಗೌಡ ಬಿನ್ ಮಂಜೇಗೌಡ,
55 ವರ್ಷ,
ಪ್ರಸಾದಿಹಳ್ಳಿ ಗ್ರಾಮ,
ಕಸಬಾ ಹೋಬಳಿ, ಬೇಲೂರು ತಾಲ್ಲೂಕು.
ಹಾಲಿ ವಾಸಃ
ಕೆಂಪೇಗೌಡ ರಸ್ತೆ, ಬೇಲೂರು. ...ವಾದಿ

(ವಾದಿಯ ಪರವಾಗಿ ಶ್ರೀ ಜಿ.ಸಿ.ಪುಟ್ಟಸ್ವಾಮಿಗೌಡ, ವಕೀಲರು ಪ್ರತಿನಿಧಿಸಿರುತ್ತಾರೆ.)

ವಿರುದ್ಧ

1. ಶ್ರೀಮತಿ ಗೌರಮ್ಮ ಕೋಂ ತಿಮ್ಮೇಗೌಡ,
67 ವರ್ಷ,

2. ಶ್ರೀಮತಿ ನಂಜಮ್ಮ ಕೋಂ ತಮ್ಮಣ್ಣಗೌಡ,
67 ವರ್ಷ,

3. ಶ್ರೀಮತಿ ವಿಜಯ ಕೋಂ ಯೋಗೀಶ ಬಿನ್ ಪಾರ್ವತಮ್ಮ,
57 ವರ್ಷ,
ಎಲ್ಲರೂ ಪ್ರಸಾದಿಹಳ್ಳಿ ಗ್ರಾಮ,
ಕಸಬಾ ಹೋಬಳಿ, ಬೇಲೂರು ತಾಲ್ಲೂಕು ವಾಸಿಗಳು. .... ಪ್ರತಿವಾದಿಗಳು

( ಪ್ರತಿವಾದಿಯರ ಪರವಾಗಿ ಶ್ರೀ ಸಿ.ಎಂ.ಚಂದ್ರೇಗೌಡ, ವಕೀಲರು ಪ್ರತಿನಿಧಿಸಿರುತ್ತಾರೆ.))

: ಮಧ್ಯಂತರ ಅರ್ಜಿ-2 ಕ್ಕೆ ಪಕ್ಷಕಾರರು :

ಶ್ರೀ ಕೆಂಪೇಗೌಡ .....ಅರ್ಜಿದಾರರು/ವಾದಿ

ವಿರುದ್ಧ

ಶ್ರೀಮತಿ ಗೌರಮ್ಮ ಮತ್ತು ಇತರರು ..ಎದುರುದಾರರು/ಪ್ರತಿವಾದಿಗಳು

ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ರಡಿ ಮಧ್ಯಕಾಲೀನ ಅರ್ಜಿ ಸಂಃ 2 ರ ಮೇಲಿನ ಆದೇಶ

ವಾದಿಯು ಪ್ರತಿವಾದಿಯರ ವಿರುದ್ಧ ಮಧ್ಯಂತರ ಅರ್ಜಿ ಸಂ-2 ನ್ನು ಸಲ್ಲಿಸಿ, ದಾವೆ ತೀರ್ಮಾನವಾಗುವವರೆಗೆ 1 ನೇ ಪ್ರತಿವಾದಿಯಾಗಲಿ ಅಥವಾ ಅವರ ಕಡೆಯವರಾಗಲೀ ದಾವಾ ಅನುಸೂಚಿ ಸ್ವತ್ತಾದ ಬೇಲೂರು ತಾಲ್ಲೂಕು, ಕಸಬಾ ಹೋಬಳಿ, ಪ್ರಾಸಾದಿಹಳ್ಳಿ ಗ್ರಾಮದ ಸರ್ವೆ ನಂ. 107/3 ಮತ್ತು ಪಂಚಾಯ್ತಿ ಖಾತಾ ನಂಬರ್ 220 ರಲ್ಲಿರುವ ಪೂರ್ವ ಪಶ್ಚಿಮ 60 ಅಡಿ ಉತ್ತರ - ದಕ್ಷಿಣ 30 ಅಡಿ ಸ್ವತ್ತಿನ ವಾದಿಯ ಶಾಂತಿಯುತ ಸ್ವಾಧೀನಾನುಭವಕ್ಕೆ ಅತಿಕ್ರಮ ಪ್ರವೇಶ ಮಾಡಿ ತಂಟೆ - ತಕರಾರು ಮಾಡದಂತೆ 1 ನೇ ಪ್ರತಿವಾದಿಯನ್ನು ನಿರ್ಬಂಧಿಸಬೇಕಾಗಿ ಪ್ರಾರ್ಥಿಸುತ್ತಾರೆ.

2. ವಾದಿಯು/ಅರ್ಜಿದಾರರು ತಮ್ಮ ಮಧ್ಯಂತರ ಅರ್ಜಿ-2 ರೊಂದಿಗಿರುವ ಪ್ರಮಾಣ ಪತ್ರದಲ್ಲಿ ಹೇಳುವುದೇನೇಂದರೆ, ದಾವಾ ಅನುಸೂಚಿ ಆಸ್ತಿ ಮಾಲತಃ 2 ಮತ್ತು 3 ನೇ ಪ್ರತಿವಾದಿಯರ ತಾಯಿಯಾದ ಪಾರ್ವತಮ್ಮ ರವರಿಗೆ ಸೇರಿದ ಸ್ವತ್ತಾಗಿದ್ದು, ಸದರಿ

ಆಸ್ತಿಯಲ್ಲಿ ಅಣ್ಣೇಗೌಡ ಎಂಬುವವರಿಗೆ 1977 ರಲ್ಲಿ ಒಂದು ಕ್ರಯ ಪತ್ರದ ಮೂಲಕ 38 * 75 ಅಡಿಗಳನ್ನು ನೀಡಿದ್ದು, ನಂತರ ಸದರಿ ಆಸ್ತಿಯಲ್ಲಿ ಶಿವಣ್ಣ ಎಂಬುವವರಿಗೆ ಕ್ರಯಪತ್ರ ಸಂಖ್ಯೆ 1088-89/90 ರಂತೆ ದಿನಾಂಕಃ 27.02.1990 ರಲ್ಲಿ 60 * 30 ಅಳತೆಯ ಜಾಗವನ್ನು ನೀಡಿದ್ದು, ಸದರಿ ಶಿವಣ್ಣ ನವರು ದಿನಾಂಕಃ 20.03.1990 ರಲ್ಲಿ ಕ್ರಯಪತ್ರ ಸಂಖ್ಯೆಃ1167/1989-90 ರಲ್ಲಿ ವಾದಿಗೆ ಕ್ರಯಕ್ಕೆ ನೀಡಿರುತ್ತಾರೆ. ಅದರಂತೆ ಸನ್ಯಾಸಿಹಳ್ಳಿ ಗ್ರಾಮ ಪಂಚಾಯ್ತಿಯಲ್ಲಿ ಅಸೆಸ್ ಮೆಂಟ್ ಸಂಖ್ಯೆ 220 ರಲ್ಲಿ ವಾದಿಯ ಹೆಸರು ನಮೂದಾಗಿದ್ದು, ಸದರಿ ದಿನದಿಂದಲೇ ವಾದಿಯು ದಾವಾ ಆಸ್ತಿಯಲ್ಲಿ ದನದ ಕೊಟ್ಟಿಗೆ, ಹಿತ್ತಲು, ಗಾಡಿ ಕೊಟ್ಟಿಗೆ, ತಿಪ್ಪೆ ಮಾಡಿಕೊಂಡು ಬೇಲಿಯನ್ನು ನಿರ್ಮಿಸಿಕೊಂಡು ಶಾಂತಿಯುತವಾದ ಸ್ವಾಧೀನಾನುಭವದಲ್ಲಿರುತ್ತಾರೆ.

3. ವಾದಿಯು ಮುಂದುವರೆದು ತನ್ನ ಪ್ರಮಾಣ ಪತ್ರದಲ್ಲಿ ಭಿನ್ನವಿಸಿಕೊಳ್ಳುವುದೇನೆಂದರೆ, ವಿದ್ಯಮಾನಗಳು ಹೀಗಿರುವಾಗ, ಕ್ರಯಪತ್ರಗಳು ಪಂಚಾಯಿತಿ ಖಾತೆ ನಂಬರ್ ನ ಮೇಲೆ ಆಗಿದ್ದರಿಂದ ರೆವಿನ್ಯೂ ದಾಖಲಾತಿಗಳು 2 ಮತ್ತು 3 ನೇ ಪ್ರತಿವಾದಿಗಳ ತಾಯಿಯಾದ ಪಾರ್ವತಮ್ಮ ರವರ ಹೆಸರಿನಲ್ಲಿ ಇರುವುದನ್ನು ಪ್ರತಿವಾದಿಗಳು ದುರುಪಯೋಗ ಮಾಡಿಕೊಂಡು ಸದರಿಯವರ ತಾಯಿಯ ಮರಣಾ ನಂತರ ಪೌತಿ ಖಾತೆಯನ್ನು 3 ನೇ ಪ್ರತಿವಾದಿ ತನ್ನ ಹೆಸರಿಗೆ ಮಾಡಿಕೊಂಡು ಸರ್ವೆ ನಂ.107/3 ರಲ್ಲಿದ್ದ 20 ಗುಂಟೆ ಆಸ್ತಿಯನ್ನು 1 ನೇ ಪ್ರತಿವಾದಿಗೆ ಮಾರಾಟ ಮಾಡಿದಂತೆ ಒಂದು ಸುಳ್ಳು ಕ್ರಯಪತ್ರವನ್ನು ಸೃಷ್ಟಿಸಿ ಸದರಿ ಕ್ರಯ ಪತ್ರದ ಆಧಾರದ ಮೇಲೆ 1 ನೇ ಪ್ರತಿವಾದಿ ರೆವಿನ್ಯೂ ಅಧಿಕಾರಿಗಳನ್ನು ಷರೀಕು ಮಾಡಿಕೊಂಡು ತನ್ನ ಹೆಸರಿಗೆ ಹಕ್ಕು ದಾಖಲೆಗಳನ್ನು ಮಾಡಿಕೊಂಡಿದ್ದು, ಅದರ ಆಧಾರದ ಮೇಲೆ ವಾದಿಗೆ 2020 ನೇ ಇಸವಿಯಿಂದ ತೊಂದರೆ ನೀಡುತ್ತಿರುತ್ತಾರೆ. ಈ ಬಗ್ಗೆ ಪ್ರತಿವಾದಿಯನ್ನು ಕೇಳಿದಾಗ ಸರಿಪಡಿಸುತ್ತೇವೆಂದು ತಿಳಿಸಿರುತ್ತಾರೆ. ಅದೇ ರೀತಿ ಹಿಂದೆ ಕ್ರಯಕ್ಕೆ ಪಡೆದಿದ್ದ ಅಣ್ಣೇಗೌಡ ರವರ ಮಗ ಲಕ್ಷ್ಮೇಗೌಡ ರವರು ಪ್ರತಿವಾದಿಯರ ವಿರುದ್ಧ ಈ ನ್ಯಾಯಾಲಯದಲ್ಲಿ ಅಸಲು ದಾವಾ ನಂ.283/2020 ರಂತೆ ದಾವೆಯನ್ನು ಹೂಡಿರುತ್ತಾರೆ. ಈಗ 1 ನೇ ಪ್ರತಿವಾದಿಯು ಪುನಃ ದಾವಾ ಹೂಡುವ ಒಂದು ತಿಂಗಳಿಂದ ತನಗೆ ಆಗಿದೆ ಎಂದು ಹೇಳಲಾಗುವ ಕ್ರಯಪತ್ರದ ಆಧಾರದ ಮೇಲೆ ಮಾಡಿಸಿಕೊಂಡಿರುವ ಸುಳ್ಳು ರೆವಿನ್ಯೂ ದಾಖಲಾತಿಗಳ ಆಧಾರದ ಮೇಲೆ

ತೊಂದರೆಯನ್ನು ನೀಡುತ್ತಿದ್ದು, ಆದ್ದರಿಂದ ವಾದಿಯು ಸೂಕ್ತ ರಕ್ಷಣೆಯನ್ನು ಕೋರಿ ಈ ದಾವೆಯನ್ನು ಮತ್ತು ಮಧ್ಯಂತರ ಅರ್ಜಿ-2 ನ್ನು ಸಲ್ಲಿಸಿ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶದ ಮೂಲಕ 1 ನೇ ಪ್ರತಿವಾದಿಯನ್ನು ನಿರ್ಬಂಧಿಸಬೇಕಾಗಿ ಪ್ರಾರ್ಥಿಸಿರುತ್ತಾರೆ.

4. ದಾವಾ ಸಲ್ಲಿಸಿದ ಬಳಿಕ ನ್ಯಾಯಾಲಯ ಹೊರಡಿಸಿದ ಸಮನ್ಸ್ ಗೆ ಪ್ರತಿಯಾಗಿ 1 ನೇ ಪ್ರತಿವಾದಿಯು ತನ್ನ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ. ಅಲ್ಲದೇ ಸದರಿ ಲಿಖಿತ ಹೇಳಿಕೆಯನ್ನೇ ವಾದಿಯು ಸಲ್ಲಿಸಿರುವ ಮಧ್ಯಂತರ ಅರ್ಜಿ–2 ಕ್ಕೂ ಸಹ ಆಕ್ಷೇಪಣೆಯನ್ನಾಗಿ ಅಳವಡಿಸಿಕೊಂಡಿರುತ್ತಾರೆ. 1 ನೇ ಪ್ರತಿವಾದಿಯು ತನ್ನ ತಕರಾರಿನಲ್ಲಿ ಹೇಳುವುದೇನೆಂದರೆ, ವಾದಿಯು ತಂದಿರುವ ದಾವೆಯು ಕಾನೂನು ರೀತ್ಯವಾಗಲೀ ಅಥವಾ ವಸ್ತು ಸ್ಥಿತಿಯ ರೀತ್ಯವಾಗಲಿ ನಿಲ್ಲತಕ್ಕದಲ್ಲ, ವಾದಿಯು ದಾವಾದಲ್ಲಿ ತಿಳಿಸಿರುವ ಚೆಕ್ಕು ಬಂದಿ ಮತ್ತು ವಿಸ್ತೀರ್ಣ ಸರಿಯಾಗಿರುವುದಿಲ್ಲ, ದಾವಾದಲ್ಲಿ ಅವಶ್ಯಕ ಪಕ್ಷಗಾರರನ್ನು ಮಾಡಿರುವುದಿಲ್ಲವೆಂದು ಹಾಗೂ ವಾದಿಯು ತಂದಿರುವ ದಾವಾಕ್ಕೆ ಕಾಲಮಿತಿಯಾಗಿರುತ್ತದೆ ಎಂದು ಹೇಳುತ್ತಾರೆ. ಮುಂದುವರೆದು, ವಾದಿಯು 1 ನೇ ಪ್ರತಿವಾದಿಯ ಹಕ್ಕು ಮತ್ತು ಸ್ವಾಧೀನದಲ್ಲಿರುವ ಸ್ವತ್ತಿಗೆ ಚೆಕ್ಕು ಬಂದಿಯನ್ನು ನೀಡಿ ಈ ದಾವೆಯನ್ನು ತಂದಿದ್ದು, ದಾವಾ ಆಸ್ತಿಯಲ್ಲಿ ವಾದಿಯು ಯಾವ ಕಾಲದಲ್ಲಿಯೂ ಸಹ ಸ್ವಾಧೀನದಲ್ಲಿರುವುದಿಲ್ಲ. ದಿನಾಂಕ 20.03.1990 ರಲ್ಲಿ ಆಗಿದೆ ಎನ್ನು ಕ್ರಯಪತ್ರದಲ್ಲಿ ದಾವಾ ಆಸ್ತಿಯು ವಾದಿಗೆ ಕ್ರಯವಾಗಿರುವುದಿ, ದಾವಾ ಅನುಸೂಚಿ ಸ್ವತ್ತು 1 ನೇ ಪ್ರತಿವಾದಿಗೆ ದಿನಾಂಕ 10.03.2003 ರಂದು 3 ನೇ ಪ್ರತಿವಾದಿಯು ಶುದ್ಧ ಕ್ರಯ ಪತ್ರದ ಮುಖಾಂತರ ಬರೆದುಕೊಟ್ಟಿದ್ದು, ಅದರಂತೆ ರೆವಿನ್ಯೂ ದಾಖಲಾತಿಗಳಲ್ಲಿ 1 ನೇ ಪ್ರತಿವಾದಿಯ ಹೆಸರು ದಾಖಲಾಗಿ 1 ನೇ ಪ್ರತಿವಾದಿಯು ದಾವಾ ಆಸ್ತಿಯಲ್ಲಿ ಸ್ವಾಧೀನದಲ್ಲಿರುತ್ತಾರೆ. ಆದ್ದರಿಂದ ವಾದಿಯು ತಂದಿರುವ ದಾವೆಯನ್ನು ಮತ್ತು ಪ್ರಸ್ತುತ ಅರ್ಜಿಯನ್ನು ವಜಾಮಾಡಬೇಕಾಗಿ ಕೋರಿರುತ್ತಾರೆ.

5. ವಾದಿಯು ಸಲ್ಲಿಸಿರುವ ಮಧ್ಯಂತರ ಅರ್ಜಿ–2 ಹಾಗೂ 1 ನೇ ಪ್ರತಿವಾದಿಯು ಸಲ್ಲಿಸಿರುವ ಲಿಖಿತ ಹೇಳಿಕೆಯನ್ನೇ ಮಧ್ಯಂತರ ಅರ್ಜಿ– 2 ಕ್ಕೆ ತಕರಾರು ಎಂದು ಪರಿಗಣಿಸಿ ಅರ್ಜಿಯ ಇತ್ಯರ್ಥಕ್ಕಾಗಿ ಈ ಕೆಳಗಿನಂತೆ ಅಂಶಗಳನ್ನು ಈ ನ್ಯಾಯಾಲಯವು ರೂಪಿಸಿರುತ್ತದೆ.

1. ವಾದಿಯ ದಾವಾ ಆಸ್ತಿಯ ಶಾಂತಿಯುತವಾದ ಸ್ವಾಧೀನಾನುಭವಕ್ಕೆ 1 ನೇ ಪ್ರತಿವಾದಿಯು ಅಡ್ಡಿ - ಆತಂಕ ತೊಂದರೆ ಉಂಟು ಮಾಡುತ್ತಿದ್ದಾರೆ ಎಂದು ಮೇಲ್ನೋಟಕ್ಕೆ ತೋರಿಸುತ್ತಾರೆಯೇ?

2. ವಾದಿಯು ಅರ್ಜಿಯಲ್ಲಿ ಕೋರಿರುವಂತೆ ತಮ್ಮ ಪರವಾಗಿ ಅನುಕೂಲತೆಯ ಒಲವು ಇದೆ ಎಂಬುದನ್ನು ತೋರಿಸುತ್ತಾರೆಯೇ?

3. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗೆ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಮಂಜೂರು ಮಾಡದಿದ್ದರೆ ತುಂಬಲಾರದ ಹಾನಿ ಅಥವಾ ನಷ್ಟ ಉಂಟಾಗುವ ಸಂಭವವಿದೆ ಎಂಬುದನ್ನು ತೋರಿಸುತ್ತಾರೆಯೇ?

4. ಯಾವ ಆದೇಶ?

6. ಉಭಯ ಪಕ್ಷಗಾರರ ವಾದವನ್ನು ಆಲಿಸಲಾಯಿತು.

7. ವಾದಿಯು /ಅರ್ಜಿದಾರರು ಸಲ್ಲಿರುವ ಅರ್ಜಿ, 1 ನೇ ಪ್ರತಿವಾದಿಯು ಸಲ್ಲಿಸಿರುವ ಲಿಖಿತ ಹೇಳಿಕೆಯನ್ನೇ ಮಧ್ಯಂತರ ಅರ್ಜಿ– 2 ಕ್ಕೆ ತಕರಾರು ಎಂದು ಪರಿಗಣಿಸಿ ಹಾಗೂ ಲಭ್ಯವಿರುವ ದಾಖಲೆಗಳನ್ನು ಆಧರಿಸಿ, ಈ ನ್ಯಾಯಾಲಯವು ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಿರುತ್ತದೆ.

ಅಂಶ:1 ನಕಾರಾತ್ಮಕವಾಗಿ

ಅಂಶ:2 ನಕಾರಾತ್ಮಕವಾಗಿ

ಅಂಶ:3 ನಕಾರಾತ್ಮಕವಾಗಿ

ಅಂಶ:4 ಅಂತಿಮ ಆದೇಶದಂತೆ
ಈ ಕೆಳಕಂಡ ಕಾರಣಗಳಿಗಾಗಿ

: ಕಾರಣಗಳು :

8. ಅಂಶಗಳು: 1 ರಿಂದ 3 : ಈ ಮೂರೂ ಅಂಶಗಳು ಒಂದಕ್ಕೊಂದು ಸಂಬಂಧಪಟ್ಟಿರುವುದರಿಂದ ಹಾಗೂ ವಿಷಯಗಳ ಪುನರಾವರ್ತನೆಯನ್ನು ತಪ್ಪಿಸುವ ಉದ್ದೇಶದಿಂದ ಅವುಗಳನ್ನು ಒಟ್ಟಿಗೆ ವಿಮರ್ಶೆಗೆ ತೆಗೆದುಕೊಳ್ಳಲಾಗಿದೆ.

9. ವಾದಿಯು ಈ ದಾವೆಯನ್ನು ಪ್ರತಿವಾದಿಯರ ವಿರುದ್ಧ ಶಾಶ್ವತ ನಿರ್ಬಂಧಕಾಜ್ಞೆಯ ಪರಿಹಾರ ಕೋರಿ ಸಲ್ಲಿಸಿರುತ್ತಾರೆ. ಸದರಿ ದಾವಾದೊಂದಿಗೆ ಮಧ್ಯಂತರ ಅರ್ಜಿ ಸಂ–2 ನ್ನು ಸಲ್ಲಿಸಿ, ದಾವಾ ಅನುಸೂಚಿ ಸ್ವತ್ತಿಗೆ 1 ನೇ ಪ್ರತಿವಾದಿಯಾಗಲಿ ಅಥವಾ ಅವರ ಕಡೆಯವರಾಗಲೀ ಅತಿಕ್ರಮ ಪ್ರವೇಶ ಮಾಡಿ ವಾದಿಯ ಶಾಂತಿಯುತವಾದ ಸ್ವಾಧೀನಾನುಭವಕ್ಕೆ ತಂಟೆ - ತಕರಾರು ಮಾಡದಂತೆ ತಾತ್ಕಾಲಿಕ ನಿರ್ಬಂಧಕಾಜ್ಞೆ ಮೂಲಕ 1 ನೇ ಪ್ರತಿವಾದಿಯನ್ನು ನಿರ್ಬಂಧಿಸಬೇಕಾಗಿ ಪ್ರಾರ್ಥಿಸುತ್ತಾರೆ.

10. ವಾದಿಯ ಪ್ರಕಾರ ದಾವಾ ಅನುಸೂಚಿ ಸ್ವತ್ತು ಮಾಲತಃ 2 ಮತ್ತು 3 ನೇ ಪ್ರತಿವಾದಿಯರ ತಾಯಿಯಾದ ಪಾರ್ವತಮ್ಮ ರವರಿಗೆ ಸೇರಿದ ಸ್ವತ್ತಾಗಿದ್ದು, ಸದರಿ ಆಸ್ತಿಯಲ್ಲಿ ಅಣ್ಣೇಗೌಡ ಎಂಬುವವರಿಗೆ 1977 ರಲ್ಲಿ ಕ್ರಯ ಪತ್ರದ ಮೂಲಕ 38 * 75 ಅಡಿಗಳನ್ನು ನೀಡಿದ್ದು, ನಂತರ ಸದರಿ ಆಸ್ತಿಯಲ್ಲಿ ಶಿವಣ್ಣ ಎಂಬುವವರಿಗೆ ಕ್ರಯಪತ್ರ ಸಂಖ್ಯೆ 1088-89/90 ರಂತೆ ದಿನಾಂಕಃ 27.02.1990 ರಲ್ಲಿ 60 * 30 ಅಳತೆಯ ಜಾಗವನ್ನು ನೀಡಿರುತ್ತಾರೆ ಎಂದು ಹೇಳಿದ್ದು, ಅದರಂತೆ ವಾದಿಯು ದಿನಾಂಕಃ 27.02.1990 ರ ಕ್ರಯ ಪತ್ರವನ್ನು ಹಾಜರುಪಡಿಸಿರುತ್ತಾರೆ. ನಂತರ ಸದರಿ ಶಿವಣ್ಣ ರವರು ದಿನಾಂಕಃ 20.03.1990 ರಲ್ಲಿ ಕ್ರಯಪತ್ರ ಸಂಖ್ಯೆಃ 1167/1989-90 ರಲ್ಲಿ ವಾದಿಗೆ ದಾವಾ ಆಸ್ತಿಯನ್ನು ಕ್ರಯಕ್ಕೆ ನೀಡಿರುವ ಬಗ್ಗೆಯು ಸಹ ದಿನಾಂಕಃ 20.03.1990 ರ ಕ್ರಯ ಪತ್ರವನ್ನು ಹಾಜರುಪಡಿಸಿತ್ತಾರೆ. ಇನ್ನು ವಾದಿಯು ಸದರಿ ದಾವಾ ಆಸ್ತಿಯ ರೆವಿನ್ಯೂ ದಾಖಲಾತಿಗಳು 2 ಮತ್ತು 3 ನೇ ಪ್ರತಿವಾದಿಯ ತಾಯಿಯಾದ ಪಾರ್ವತಮ್ಮ ರವರ ಹೆಸರಿನಲ್ಲಿ ಮುಂದುವರೆದುಕೊಂಡು ಬಂದಿದ್ದು, ಅವರ ಮರಣಾ ನಂತರ 3 ನೇ ಪ್ರತಿವಾದಿಯ ಪೌತಿ ಖಾತೆಯ ಆಧಾರ ಮೇಲೆ ತನ್ನ ಹೆಸರಿಗೆ ಮಾಡಿಕೊಂಡು ಸರ್ವೆ ನಂ.107/3 ರಲ್ಲಿದ್ದ 20 ಗುಂಟೆ ಆಸ್ತಿಯನ್ನು 1 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದು ಹೇಳಿದ್ದು, ಅದರಂತೆ ವಾದಿಯು ದಿನಾಂಕಃ 10.03.2003 ರಂದು 3 ನೇ ಪ್ರತಿವಾದಿಯು 1 ನೇ ಪ್ರತಿವಾದಿಗೆ ಸರ್ವೆ ನಂ. 107/3 ರ ಪೈಕಿ 20 ಗುಂಟೆ ಜಮೀನನ್ನು ಕ್ರಯಕ್ಕೆ ಕೊಟ್ಟಿರುವ ಬಗ್ಗೆ ಕ್ರಯ ಪತ್ರವನ್ನು ಸಹ ಹಾಜರುಪಡಿಸಿರುತ್ತಾರೆ. ಇನ್ನು ವಾದಿಯು 01-04-1988 ರಿಂದ 17-09-1991 ರ ವರೆಗಿನ ಋಣಭಾರ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ಅದರಂತೆ

ಖಾತೆ ನಂ. 17 ರಲ್ಲಿ ವಿಸ್ತೀರ್ಣ 30 * 60 ಅಡಿ ನಿವೇಶನದಲ್ಲಿ ವಾದಿಯ ಹೆಸರು ನಮೂದಾಗಿರುವುದನ್ನು ಕಾಣಬಹುದಾಗಿದೆ. ಇದರಲ್ಲಿ ಗಮನಿಸಬೇಕಾದ ಅಂಶವೇನೆಂದರೆ ಸದರಿ ಋಣಭಾರ ಪ್ರಮಾಣ ಪತ್ರದಲ್ಲಿ ಕೇವಲ ಖಾತೆ ನಂ.17 ಎಂದು ನಮೂದಾಗಿದ್ದು, ಸರ್ವೆ ನಂಬರ್ ಯಾವುದು ಎಂದು ನಮೂದಾಗಿರುವುದಿಲ್ಲ. ಇನ್ನು 01-01-1977 ರಿಂದ 01-01-1980 ರ ಇನ್ನೊಂದು ಋಣಭಾರ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ಅದರಲ್ಲಿ ಪಾರ್ವತಮ್ಮ ರವರು ಅಣ್ಣೇಗೌಡ ರವರಿಗೆ ಸರ್ವೆ ನಂ.107/3 ರಲ್ಲಿ ಪೂರ್ವ -ಪಶ್ಚಿಮ 38 ಅಡಿ, ಉತ್ತರ – ದಕ್ಷಿಣ 75 ಅಡಿ ಯನ್ನು ಕ್ರಯಕ್ಕೆ ಕೊಟ್ಟಿದ್ದು, ಅದರಂತೆ ಅಣ್ಣೇಗೌಡ ರವರು ಸದರಿ 38 * 75 ಅಡಿ ನಿವೇಶನದಲ್ಲಿ ಸ್ವಾಧೀನದಲ್ಲಿರುವುದನ್ನು ಕಾಣಬಹುದಾಗಿದೆ. ವಾದಿಯು ದಾವಾ ಆಸ್ತಿಗೆ ಸಂಬಂಧಿಸಿದ ಒಂದು ಕರಡು ನಕ್ಷೆಯನ್ನು ಸಹ ಹಾಜರುಪಡಿಸಿರುತ್ತಾರೆ. ಇನ್ನು ವಾದಿಯು ಈ ಹಿಂದೆ ಕ್ರಯಕ್ಕೆ ಪಡೆದಿದ್ದ ಅಣ್ಣೇಗೌಡ ರವರ ಮಗ ಲಕ್ಕೇಗೌಡ ರವರು ಪ್ರತಿವಾದಿಗಳ ವಿರುದ್ದ ಹೂಡಿರುವ ದಾವೆಯಾದ ಅಸಲು ದಾವಾ ಸಂಖ್ಯೆ 283/2020 ರ ವಾದ ಪತ್ರವನ್ನು ಹಾಜರು ಪಡಿಸಿದ್ದು, ಅದು ಆ ದಾವೆಯ ದಾವಾ ಆಸ್ತಿಯಾದ ಸರ್ವೆ ನಂ.107/3 ರಲ್ಲಿ ಪೂರ್ವ -ಪಶ್ಚಿಮ 38 ಅಡಿ, ಉತ್ತರ – ದಕ್ಷಿಣ 75 ಅಡಿ ಗೆ ಸಂಬಂಧಿಸಿದಂತೆ ಹೂಡಿದ ದಾವೆಯಾಗಿರುತ್ತದೆ. ಸದರಿ ದಾವೆಯು ಇನ್ನು ಚಾಲ್ತಿಯಲ್ಲಿರುತ್ತದೆ ಹಾಗೂ ವಾದಿ ತಂದಿರುವ ಈ ದಾವೆಯ ದಾವಾ ಅನುಸೂಚಿ ಆಸ್ತಿ ಹಾಗೂ ಸದರಿ ಅಸಲು ದಾವಾ ಸಂಖ್ಯೆ 283/2020 ರ ಅನುಸೂಚಿ ಆಸ್ತಿ ಬೇರೆ ಬೇರೆ ಆಗಿರುತ್ತದೆ ಹಾಗೂ ಈ ದಾವೆಯ 1 ರಿಂದ 3 ನೇ ಪ್ರತಿವಾದಿಗಳು ಸದರಿ ದಾವೆಯಲ್ಲಿನ 11 ಜನ ಪ್ರತಿವಾದಿಗಳ ಪೈಕಿ 3 ಜನ ಆಗಿರುತ್ತಾರೆ.

11. ಹೀಗಿರುವಾಗ ಪ್ರತಿವಾದಿಯರು ತಮ್ಮ ವಾದ ಮಂಡನೆ ಸಮಯದಲ್ಲಿ ವಾದಿಗೆ ದಾವಾ ಆಸ್ತಿಯನ್ನು ಶಿವಣ್ಣ ಎಂಬುವವರು ಕ್ರಯಕ್ಕೆ ನೀಡಿರುವ ಬಗ್ಗೆ ಕ್ರಯ ಪತ್ರವನ್ನು ಹಾಜರುಪಡಿಸಿದ್ದು, ಅದರಲ್ಲಿ ಪೂರ್ವ ಪಶ್ಚಿಮ 30 ಅಡಿ, ಉತ್ತರ ದಕ್ಷಿಣ 60 ಅಡಿ ಎಂದು ನಮೂದಾಗಿದ್ದು, ಆದರೆ ವಾದಿಯು ತನ್ನ ವಾದ ಪತ್ರದಲ್ಲಿನ ಷೆಡ್ಯೂಲ್ ನಲ್ಲಿ ಪೂರ್ವ ಪಶ್ಚಿಮ 60 ಅಡಿ, ಉತ್ತರ ದಕ್ಷಿಣ 30 ಅಡಿ ಎಂದು ವ್ಯತಿರಿಕ್ತವಾಗಿ ನಮೂದಿಸಿರುತ್ತಾರೆ, ಆದ್ದರಿಂದ ದಾವಾ ಆಸ್ತಿಯ ಚೆಕ್ಕುಬಂದಿಯಲ್ಲಿಯೂ ಸಹ ವ್ಯತ್ಯಾಸಗಳು ಆಗುತ್ತದೆ ಎಂದು ಹೇಳುತ್ತಾರೆ. ಇನ್ನು ವಾದಿಯು ಹಾಜರುಪಡಿಸಿರುವ ಋಣಭಾರ

ಪ್ರಮಾಣ ಪತ್ರದಲ್ಲಿಯೂ ಸಹ ಕೇವಲ ಖಾತೆ ನಂಬರ್ 17 ಎಂದು ಮಾತ್ರ ನಮೂದಾಗಿದ್ದು, ಅದರಲ್ಲಿ ಸರ್ವೆ ನಂಬರ್ ನಮೂದಾಗಿರುವುದಿಲ್ಲ. ಇನ್ನು ದಾವಾ ಆಸ್ತಿಯೂ ಮೂಲತಃ 2 ಮತ್ತು 3 ನೇ ಪ್ರತಿವಾದಿಯ ತಾಯಿಯಾದ ಪಾರ್ವತಮ್ಮ ರವರಿಗೆ ಸೇರಿದ ಆಸ್ತಿಯಾಗಿದ್ದು, ಸದರಿಯವರು ಅಣ್ಣೇಗೌಡ ರವರಿಗೆ 1977 ರಲ್ಲಿ ಕ್ರಯ ಪತ್ರದ ಮೂಲಕ 38 *75 ಅಡಿಗಳನ್ನು ನೀಡಿರುತ್ತಾರೆ ಎಂದು ನುಡಿದಿದ್ದು, ಆದರೆ ಸದರಿ ಕ್ರಯಪತ್ರವನ್ನು ಈ ಹಂತದಲ್ಲಿ ವಾದಿಯು ಹಾಜರುಪಡಿಸಿರುವುದಿ. ಮತ್ತು ಸದರಿ ನಿವೇಶನದ ಸಂಖ್ಯೆ 38 * 75 ಅಡಿಗಳಿದ್ದು, ವಾದಿಯ ದಾವೆಯಲ್ಲಿ ಸರ್ವೆ ನಂ. 107/3 ರಲ್ಲಿ 60 *30 ಅಡಿ ಸ್ವತ್ತಿಗೆ ಸಂಬಂಧಿಸಿದಂತೆ ದಾವೆಯನ್ನು ಹೂಡಿರುತ್ತಾರೆ. ಇನ್ನು ವಾದಿಯೇ 3 ನೇ ಪ್ರತಿವಾದಿಯು 1 ನೇ ಪ್ರತಿವಾದಿಯ ಹೆಸರಿಗೆ ಸದರಿ ಸರ್ವೆ ನಂ. 107/3 ರ ಪೈಕಿ 20 ಗುಂಟೆ ಜಮೀನನ್ನು ಕ್ರಯಕ್ಕೆ ಕೊಟ್ಟಿರುವ ಬಗ್ಗೆ ದಿನಾಂಕಃ 10-03-2003 ರ ಕ್ರಯಪತ್ರವನ್ನು ಹಾಜರುಪಡಿಸಿರುತ್ತಾ. ಆದ್ದರಿಂದ ವಾದಿಯು ಹಾಜರುಪಡಿಸಿರುವ ದಾಖಲೆಗಳಿಗೂ ಹಾಗೂ ದಾವೆಯಲ್ಲಿ ಕೇಳಿರುವ ಪರಿಹಾರಗಳಿಗೂ ಒಂದಕ್ಕೊಂದು ಸಂಬಂಧವಿರುವುದಿಲ್ಲವೆಂದು ಈ ಹಂತದಲ್ಲಿ ಹೇಳಬಹುದಾಗಿದೆ. ಇನ್ನು ಪ್ರತಿವಾದಿಯ ಪರ ವಕೀಲರು ತಮ್ಮ ವಾದ ಮಂಡನೆ ಸಮಯದಲ್ಲಿ ತೆಗೆದುಕೊಂಡಿರುವ ನಿಲುವನ್ನು ಅಲ್ಲಗಳೆಯುವ ಸಲುವಾಗಿ ವಾದಿಯು ಈ ಹಂತದಲ್ಲಿ ಯಾವುದೇ ವಾದ ಮಂಡನೆ ಮಾಡಿರುವುದಿಲ್ಲ ಹಾಗೂ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ . ಅಲ್ಲದೇ ದಾವಾ ಆಸ್ತಿಯಲ್ಲಿ ತಾನೇ ಸ್ವಾಧೀನವಿರುವ ಬಗ್ಗೆ ಯಾವುದೇ ದಾಖಲೆಗಳನ್ನು ವಾದಿಯು ಈ ಹಂತದಲ್ಲಿ ಹಾಜರುಪಡಿಸಿರುವುದಿಲ್ಲ. ಕೇವಲ ವಾದಿ ಹಾಜರುಪಡಿಸಿದ ಕರಡು ನಕ್ಷೆಯ ಮೇಲೆ ಈ ಹಂತದಲ್ಲಿ ಯಾವುದೇ ನಿಲುವು ತೆಗೆದುಕೊಳ್ಳಲು ಬರುವುದಿಲ್ಲ. ಅಲ್ಲದೇ ವಾದಿ ಅವಲಂಬಿತವಾಗಿರುವ ದಾಖಲೆಗಳಲ್ಲಿಯೇ ಖಾತೆ ಸಂಖ್ಯೆಗಳು ಮತ್ತು ಅಳತೆ ಅಂದರೆ ಋಣಭಾರ ಪತ್ರದ ದಾಖಲೆಯಲ್ಲಿ 30 * 60 ಅಡಿ ಎಂದು ಖಾತೆ ನಂ.17 ಎಂದು ಇದ್ದು, ಬೇಡಿಕೆ ವಹಿಯಲ್ಲಿ ಅಳತೆ 60 * 30 ಅಡಿ ಎಂದೂ ಖಾತೆ ನಂ. 220 ಎಂದೂ ಇರುತ್ತದೆ. ಆದ್ದರಿಂದ ಮೇಲ್ನೋಟಕ್ಕೆ ವಾದಿಯ ದಾವಾ ಸ್ವತ್ತಿನ ಸ್ವಾಧೀನಾನುಭವದ ಬಗ್ಗೆ ಗೊಂದಲವಿರುತ್ತದೆ. ಇದಕ್ಕೆ ಪರಿಹಾರವಾಗಿ ವಾದಿ ಸ್ವತಃ ಸಿವಿಲ್ ಪ್ರಕ್ರಿಯಾ ಸಂಹಿತೆ

ಕ್ರಮಾದೇಶ 26 ನಿಯಮ 9 ರಂತೆ ನ್ಯಾಯಾಲಯದ ಆಯುಕ್ತರನ್ನು ನೇಮಕ ಮಾಡಿ ಸ್ಥಳ ಪರಿಶೀಲನೆಗಾಗಿ ಅರ್ಜಿ ಸಲ್ಲಿಸಿದ್ದು, ಅರ್ಜಿ ಇತ್ಯರ್ಥಕ್ಕೆ ಬಾಕಿ ಇರುತ್ತದೆ.

12. ಇನ್ನು ವಾದಿಯು ಈ ದಾವಾ ಹೂಡುವ ಒಂದು ತಿಂಗಳ ಹಿಂದೆ 1 ನೇ ಪ್ರತಿವಾದಿಯು ದಾವಾ ಸ್ವತ್ತಿಗೆ ಅತಿಕ್ರಮ ಪ್ರವೇಶ ಮಾಡಿ ವಾದಿಯ ದಾವಾ ಅನುಸೂಚಿ ಆಸ್ತಿಯ ಸ್ವಾಧೀನಕ್ಕೆ ಅಡ್ಡಿ - ಆತಂಕ ಉಂಟು ಮಾಡುತ್ತಿರುತ್ತಾರೆ ಎಂದು ಹೇಳುತ್ತಾರೆ. ಆದರೆ ಸದರಿ ಅಂಶಗಳನ್ನು ರುಜುವಾತುಪಡಿಸಲು ಹಾಗೂ ವಾದಿಯೇ ದಾವಾ ಆಸ್ತಿಯಲ್ಲಿ ಸ್ವಾಧೀನದಲ್ಲಿರುತ್ತಾರೆ ಎಂದು ತೋರಿಸಲು ಈ ಹಂತದಲ್ಲಿ ವಾದಿಯು ಯಾವುದೇ ದಾಖಲೆಗಳನ್ನಾಗಲಿ ವಾದ ಮಂಡನೆಯಾಗಲಿ ಮಾಡಿರುವುದಿಲ್ಲ. ಆದ್ದರಿಂದ ಮೇಲ್ನೋಟಕ್ಕೆ ಈ ನ್ಯಾಯಾಲಯವು ಒಪ್ಪುವಂತಹ ದಾಖಲೆಗಳು ಈ ಹಂತದಲ್ಲಿ ಲಭ್ಯವಿಲ್ಲದ ಕಾರಣ, ವಾದಿಯು ಕೇಳಿರುವ ಪರಿಹಾರವನ್ನು ಪಡೆಯಲು ವಿಫಲರಾಗಿರುತ್ತಾರೆ. ಆದ್ದರಿಂದ ಅನುಕೂಲತೆಯ ಒಲವು ವಾದಿಯ ಪರವಾಗಿ ಇರುವುದಿಲ್ಲ. ಆದಕಾರಣ ದಾವಾ ಆಸ್ತಿಯಲ್ಲಿ ಯಾರು ಸ್ವಾಧೀನದಲ್ಲಿರುತ್ತಾರೆ ಎಂಬ ಬಗ್ಗೆ ಸುಧೀರ್ಘವಾದ ಸಾಕ್ಷ್ಯ ವಿಚಾರಣೆಯ ನಂತರವೇ ತಿಳಿದು ಬರುತ್ತದೆ. ಈ ಹಂತದಲ್ಲಿ ಸದರಿ ಅರ್ಜಿಯನ್ನು ಪುರಸ್ಕರಿಸಲು ಯಾವುದೇ ಸಕಾರಣಗಳು ಇರುವುದಿಲ್ಲ. ಪ್ರಯುಕ್ತ ವಾದಿಯ ಪರವಾಗಿ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಮಂಜೂರು ಮಾಡಲು ಸಾಧ್ಯವಿರುವುದಿಲ್ಲ. ಒಂದು ವೇಳೆ ವಾದಿಯ ಪರವಾಗಿ ತಾತ್ಕಾಲಿಕ ನಿರ್ಬಂಧಕಾಜ್ಞೆಯ ಪರಿಹಾರವನ್ನು ಮಂಜೂರು ಮಾಡದಿದ್ದರೆ ವಾದಿಗೆ ಯಾವುದೇ ರೀತಿಯ ತೊಂದರೆ ಉಂಟಾಗುವುದಿಲ್ಲ. ಆದ್ದರಿಂದ ವಾದಿಯು ಸಲ್ಲಿಸಿರುವ ಮಧ್ಯಂತರ ಅರ್ಜಿ–2 ನ್ನು ವಜಾ ಮಾಡಲು ಅರ್ಹವಾಗಿರುತ್ತದೆ. ಈ ಎಲ್ಲಾ ಕಾರಣಗಳ ಆಧಾರದ ಮೇಲೆ ಮೇಲ್ಕಂಡ ಮೂರೂ ಅಂಶಗಳನ್ನು ನ್ಯಾಯಾಲಯವು ನಕರಾತ್ಮಕವಾಗಿ ಉತ್ತರಿಸುತ್ತದೆ.

13. ಅಂಶಃ 4 :

ಈ ಮೇಲ್ಕಂಡ ಅಂಶಗಳಲ್ಲಿನ ಕಾರಣಗಳಿಂದ ಈ ನ್ಯಾಯಾಲಯವು ಈ ಕೆಳಕಂಡತೆ ಅಂತಿಮ ಆದೇಶವನ್ನು ಮಾಡಿರುತ್ತದೆ.

**ಃ ಆದೇಶ ಃ**

ವಾದಿಯು 1 ನೇ ಪ್ರತಿವಾದಿಯ ವಿರುದ್ಧ ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ರಡಿ ಸಲ್ಲಿಸಿರುವ ಮಧ್ಯಂತರ ಅರ್ಜಿ–2 ನ್ನು ವಜಾ ಮಾಡಲಾಗಿದೆ.

ಖರ್ಚಿನ ಕುರಿತು ಯಾವುದೇ ಆದೇಶವಿರುವುದಿಲ್ಲ.

(ಮೇಲ್ಕಂಡ ಆದೇಶವನ್ನು ಶೀಘ್ರಲಿಪಿಗಾರಳಿಗೆ ನೇರವಾಗಿ ಗಣಕಯಂತ್ರದಲ್ಲಿ ಉಕ್ತಲೇಖನವನ್ನು ಕೊಟ್ಟು, ಬೆರಳಚ್ಚಿನ ನಂತರ ತಿದ್ದುಪಡಿಯನ್ನು ಮಾಡಿ, ದಿನಾಂಕಃ 18 ನೇ ಜುಲೈ 2023 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.)

(ಪ್ರಸನ್ನ ಕುಮಾರ್ ಸಿ.)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಬೇಲೂರು
ಬೇಲೂರು.

<u>ಪ್ರತ್ಯೇಕ ಪ್ರತಿಯ ಆದೇಶದ ಭಾಗವನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಸಿರುತ್ತೇನೆ.</u>

**ಃ ಆದೇಶ ಃ**

ವಾದಿಯು 1 ನೇ ಪ್ರತಿವಾದಿಯ ವಿರುದ್ಧ ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ರಡಿ ಸಲ್ಲಿಸಿರುವ ಮಧ್ಯಂತರ ಅರ್ಜಿ–2 ನ್ನು ವಜಾ ಮಾಡಲಾಗಿದೆ.

ಖರ್ಚಿನ ಕುರಿತು ಯಾವುದೇ ಆದೇಶವಿರುವುದಿಲ್ಲ.

ವಾದಿ ಸಲ್ಲಿಸಿರುವ ಮಧ್ಯಂತರ ಅರ್ಜಿ –3 ಕ್ಕೆ ತಕರಾರಿಗಾಗಿಃ 04–10–2023.

(ಪ್ರಸನ್ನ ಕುಮಾರ್ ಸಿ.)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಬೇಲೂರು.